Akashvani: Bangalore
National Bulletin In Kannada
12.09.2025 : 1.10 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
12.09.2025 : 1.10 hrs

ಮುಖ್ಯಾಂಶಗಳು

೧. ಭಾರತದ ೧೫ನೇ ಉಪರಾಷ್ಟ್ರಪತಿಯಾಗಿ ಇಂದು ಪ್ರಮಾಣವಚನ ಸ್ವೀಕರಿಸಿದ ಸಿ.ಪಿ. ರಾಧಾಕೃಷ್ಣನ್

೨. ನವದೆಹಲಿಯಲ್ಲಿಂದು ಜ್ಞಾನ ಭಾರತಂ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗಿಯಾಗಲಿರುವ ಪ್ರಧಾನಿ ನರೇಂದ್ರ ಮೋದಿ

೩. ಫ್ರಾನ್ಸ್‌ನಲ್ಲಿ ಭಯೋತ್ಪಾದನೆ ವಿರೋಧ ಕುರಿತ ೧೭ನೇ ಭಾರತ-ಫ್ರಾನ್ಸ್ ಜಂಟಿ ಕಾರ್ಯಕಾರಿ ಗುಂಪು ಸಭೆ

೪. ನವದೆಹಲಿಯ ಏಮ್ಸ್‌ನಲ್ಲಿ 'ಡಾ.ವಿಂಚಿ' ಶಸ್ತ್ರಚಿಕಿತ್ಸಾ ರೋಬೋಟ್‌ಗೆ ಚಾಲನೆ; ಭಾರತದಲ್ಲಿ ರೋಬೋಟಿಕ್ ತರಬೇತಿಗೆ ಹೊಸ ಯುಗಾರಂಭ

೫. ಹಾಂಗ್‌ಕಾಂಗ್ ಓಪನ್ ಬ್ಯಾಡ್ಮಿಂಟನ್; ಪುರುಷರ ಡಬಲ್ಸ್‌ನಲ್ಲಿ ಭಾರತದ ಸಾತ್ವಿಕ್-ಚಿರಾಗ್ ಜೋಡಿ ಸೆಮಿಫೈನಲ್ ಪ್ರವೇಶ

><><><><><><

ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಭಾರತದ ೧೫ನೇ ಉಪರಾಷ್ಟ್ರಪತಿಯಾಗಿ ಸಿ ಪಿ ರಾಧಾಕೃಷ್ಣನ್ ಪ್ರಮಾಣವಚನ ಸ್ವೀಕರಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ಸಿ.ಪಿ.ರಾಧಾಕೃಷ್ಣನ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಪ್ರಮಾಣ ವಚನ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಮಾಜಿ ರಾಧಾಕೃಷ್ಣನ್ ರಾಮ್‌ನಾಥ್ ಕೋವಿಂದ್, ಮಾಜಿ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ಜೆ ಪಿ ನಡ್ಡಾ, ಪಿಯೂಷ್ ಗೋಯಲ್ ಮತ್ತು ನಿತಿನ್ ಗಡ್ಕರಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಈ ತಿಂಗಳ ೯ ರಂದು ನಡೆದ ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ರಾಧಾಕೃಷ್ಣನ್ ವಿಜಯಶಾಲಿಯಾಗಿದ್ದರು. ಅವರು ನಿನ್ನೆ ಮಹಾರಾಷ್ಟ್ರ ರಾಜ್ಯಪಾಲ ಹುದ್ದೆಗೆ ಔಪಚಾರಿಕವಾಗಿ ರಾಜೀನಾಮೆ ನೀಡಿದರು. ಅವರ ರಾಜೀನಾಮೆಯ ನಂತರ, ರಾಷ್ಟ್ರಪತಿ ದ್ರೌಪದಿ ಮುರ್ಮು ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರನ್ನು ಮಹಾರಾಷ್ಟ್ರ ರಾಜ್ಯಪಾಲರಾಗಿ ಹೆಚ್ಚುವರಿ ಜವಾಬ್ದಾರಿ ವಹಿಸಿದ್ದಾರೆ ಎಂದು ರಾಷ್ಟ್ರಪತಿ ಭವನದ ಅಧಿಕೃತ ಹೇಳಿಕೆ ದೃಢಪಡಿಸಿದೆ.

><><><><><><

ಪ್ರಧಾನಿ ನರೇಂದ್ರ ಮೋದಿಯವರು ಇಂದು ಸಂಜೆ ನವದೆಹಲಿಯಲ್ಲಿ ನಡೆಯುತ್ತಿರುವ "ಜ್ಞಾನ ಭಾರತಂ" ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು ಜ್ಞಾನ ಭಾರತಂ ಪೋರ್ಟಲ್ ಅನ್ನು ಬಿಡುಗಡೆ ಮಾಡಲಿದ್ದಾರೆ. ಇದು ಹಸ್ತಪ್ರತಿಗಳ ಡಿಜಿಟಲೀಕರಣ, ಸಂರಕ್ಷಣೆ ಹಾಗೂ ಸಾರ್ವಜನಿಕ ಪ್ರವೇಶವನ್ನು ಸುಗಮಗೊಳಿಸಲು ಮೀಸಲಾಗಿರುವ ಡಿಜಿಟಲ್ ವೇದಿಕೆಯಾಗಿದೆ. ಮೂರು ದಿನಗಳ ಈ ಸಮ್ಮೇಳನವು ನಿನ್ನೆ "ಹಸ್ತಪ್ರತಿಗಳ ಪರಂಪರೆ ಮೂಲಕ ಭಾರತದ ಜ್ಞಾನ ಪರಂಪರೆಯ ಪುನಃಶ್ಚೇತನ" ಎಂಬ ಧ್ಯೇಯವಾಕ್ಯದೊಂದಿಗೆ ಆರಂಭವಾಗಿದೆ. ದೇಶ-ವಿದೇಶಗಳಿಂದ ಬಂದಿರುವ ತಜ್ಞರು, ತಂತ್ರಜ್ಞರು ಹಾಗೂ ನೀತಿನಿರೂಪಕರು ಈ ಸಮ್ಮೇಳನದಲ್ಲಿ ಭಾಗವಹಿಸಿ, ಭಾರತದ ಅಪೂರ್ವ ಹಸ್ತಪ್ರತಿಗಳ ಸಂಪತ್ತನ್ನು ಪುನರುಜ್ಜೀವನಗೊಳಿಸಲು ಮತ್ತು ಅದನ್ನು ಜಾಗತಿಕ ಜ್ಞಾನ ಸಂವಾದದ ಕೇಂದ್ರಬಿಂದುವಾಗಿಸಲು ಮಾರ್ಗಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಸಮ್ಮೇಳನದ ಭಾಗವಾಗಿ ಅಪರೂಪದ ಹಸ್ತಪ್ರತಿಗಳ ಪ್ರದರ್ಶನ, ಹಾಗೂ ಹಸ್ತಪ್ರತಿಗಳ ಸಂರಕ್ಷಣೆ, ಡಿಜಿಟಲೀಕರಣ ತಂತ್ರಜ್ಞಾನಗಳು, ಮೆಟಾದತ್ತಾಂಶ ಮಾನದಂಡಗಳು, ಕಾನೂನು ಜಾಲಗಳು, ಸಾಂಸ್ಕೃತಿಕ ರಾಜತಂತ್ರ ಮತ್ತು ಪುರಾತನ ಲಿಪಿಗಳ ವ್ಯಾಖ್ಯಾನ ಕುರಿತು ತಜ್ಞರಿಂದ ಸಂಶೋಧನಾತ್ಮಕ ಪ್ರದರ್ಶನಗಳು ನಡೆಯಲಿವೆ.

><><><><><><

ಈ ವರ್ಷದ ಏಪ್ರಿಲ್‌ನಲ್ಲಿ ಪಹಲ್ಗಾಂನಲ್ಲಿ ನಡೆದ ಭೀಕರ ಭಯೋತ್ಪಾದಕ ದಾಳಿಯನ್ನು ಭಾರತ ಮತ್ತು ಫ್ರಾನ್ಸ್ ತೀವ್ರವಾಗಿ ಖಂಡಿಸಿವೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಸಹಕಾರ ಹೆಚ್ಚಿಸುವ ಉದ್ದೇಶದಿಂದ ಎರಡೂ ದೇಶಗಳು ಫ್ರಾನ್ಸ್‌ನಲ್ಲಿ ನಡೆದ ೧೭ನೇ ಭಾರತ-ಫ್ರಾನ್ಸ್ ಜಂಟಿ ಕಾರ್ಯಕಾರಿ ಗುಂಪು ಸಭೆಯಲ್ಲಿ ಭಾಗವಹಿಸಿವೆ. ಭಾರತೀಯ ನಿಯೋಗದ ನೇತೃತ್ವವನ್ನು ವಿದೇಶಾಂಗ ಇಲಾಖೆಯ ಭಯೋತ್ಪಾದನೆ ವಿರೋಧಿ ಜಂಟಿ ಕಾರ್ಯದರ್ಶಿ ಕೆ.ಡಿ. ದೇವಾಲ್ ವಹಿಸಿದ್ದರು. ಫ್ರಾನ್ಸ್ ನಿಯೋಗವನ್ನು

ಅಲ್ಲಿನ ಭಯೋತ್ಪಾದನೆ ವಿರೋಧಿ ರಾಯಭಾರಿ ಒಲಿವಿಯರ್ ಕರೋನ್ ಮುನ್ನಡೆಸಿದರು. ಪ್ರಾದೇಶಿಕ ಭಯೋತ್ಪಾದಕ ಚಟುವಟಿಕೆಗಳು ಮತ್ತು ಪಶ್ಚಿಮ ಏಷ್ಯಾದ ಭಯೋತ್ಪಾದನಾ ಬೆದರಿಕೆಗಳ ಬಗ್ಗೆ ಉಭಯ ದೇಶಗಳು ಅಭಿಪ್ರಾಯ ವಿನಿಮಯ ಮಾಡಿಕೊಂಡವು. ಭಯೋತ್ಪಾದನೆಯನ್ನು ಧೃಡವಾಗಿ ಎದುರಿಸಲು ತರಬೇತಿ, ಸಾಮರ್ಥ್ಯ ವೃದ್ಧಿ, ಮತ್ತು ತರಬೇತಿ ಅಭ್ಯಾಸಗಳ ಮೂಲಕ ಸಹಕಾರ ವಿಸ್ತರಿಸಲು ಒಮ್ಮತ ವ್ಯಕ್ತವಾಗಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ಭಯೋತ್ಪಾದನೆ ತಡೆಗಟ್ಟಲು ಹಾಗೂ ಭಯೋತ್ಪಾದಕರು ಹೊಸ ತಂತ್ರಜ್ಞಾನಗಳನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯದ ವಿರುದ್ಧ ಕ್ರಮವಹಿಸಲು ನಿರ್ಣಯಿಸಲಾಗಿದೆ. ಮುಂದಿನ ೧೮ನೇ ಜಂಟಿ ಕಾರ್ಯಸಮಿತಿಯ ಸಭೆಯನ್ನು ಭಾರತದಲ್ಲಿ ನಡೆಸಲು ಎರಡೂ ದೇಶಗಳು ಒಪ್ಪಿಗೆ ಸೂಚಿಸಿವೆ.

><><><><><><

ಈ ಭಾರಿಯ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ ಕೆಂಪುಕೋಟೆಯ ಮೇಲೆ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳನ್ನು ಘೋಷಿಸಿದ್ದರು. ಅದರಂತೆ ಇದೇ ಸೆಪ್ಟೆಂಬರ್ ೩ ರಂದು ಜಿಎಸ್‌ಟಿ ಕೌನ್ಸಿಲ್ ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದಿತು. ಇದರಿಂದಾಗಿ ದೇಶದ ನಾಗರಿಕರಿಗೆ ಸುಲಭ ದರದಲ್ಲಿ ಅಗತ್ಯ ವಸ್ತುಗಳು ದೊರೆಯುವಂತಾಗಲು ಇದು ಸಹಕಾರಿಯಾಗಿದೆ.

ಡೆಸ್ಕ್ ರಿಪೋರ್ಟ್

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳಿಂದ ಜನಸಾಮಾನ್ಯರಿಗೆ ಅನುಕೂಲವಾಗಲಿದ್ದು, ಅಗತ್ಯವಸ್ತುಗಳು ಸುಲಭ ದರದಲ್ಲಿ ದೊರಕುವಂತಾಗಲು ಜಿಎಸ್‌ಟಿ ಮುಕ್ತಗೊಳಿಸಲಾಗಿದೆ. ಬ್ರಾಂಡ್ ಅಲ್ಲದ ಅಕ್ಕಿ, ಗೋಧಿ, ಬೇಳೆ ಕಾಳುಗಳು, ಹಾಲು, ಬ್ರೆಡ್‌ಗಳಂತಹ ವಸ್ತುಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿಯೂ ಜಿಎಸ್‌ಟಿ ಸುಧಾರಣೆ ಜಾರಿಗೆ ತರಲಾಗಿದ್ದು, ೩೩ ಜೀವರಕ್ಷಕ ಔಷಧಿಗಳಿಗೆ ಜಿಎಸ್‌ಟಿ ವಿನಾಯಿತಿ ನೀಡಲಾಗಿದೆ. ಹಾಗೆಯೇ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಲೇಖನ ಸಾಮಗ್ರಿಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಲಾಗಿದೆ. ಇದರಿಂದಾಗಿ ಮಧ್ಯಮ, ಕೆಳಮಧ್ಯಮ ವರ್ಗದ ಜನರಿಗೆ ಅನುಕೂಲವಾಗಲಿದೆ.

><><><><><><

ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ - ಏಮ್ಸ್, ತನ್ನ ಕೌಶಲ, ಇ-ಲರ್ನಿಂಗ್ ಮತ್ತು ಟೆಲಿಮೆಡಿಸಿನ್ ಸೌಲಭ್ಯದಲ್ಲಿ ನೂತನ ಡಾ.ವಿಂಚಿ ಶಸ್ತ್ರಚಿಕಿತ್ಸಾ ರೋಬೋಟ್‌ಅನ್ನು ಅಧಿಕೃತವಾಗಿ ಉದ್ಘಾಟಿಸಿದೆ. ಇದರಿಂದ ಭಾರತದಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸಾ ತರಬೇತಿಯಲ್ಲೊಂದು ಮಹತ್ವದ ಮೈಲಿಗಲ್ಲು ಸ್ಥಾಪನೆಯಾಗಿದೆ. ಇದು ದೇಶದ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲೂ ರೋಬೋಟ್ ಶಸ್ತ್ರಚಿಕಿತ್ಸಾ ತರಬೇತಿಗಾಗಿ ಡಾ.ವಿಂಚಿ ವ್ಯವಸ್ಥೆ ಸ್ಥಾಪಿತವಾಗಿರುವ ಮೊದಲ ಉದಾಹರuಯಾಗಿದೆ. ಇಂಟ್ಯೂಟಿವ್ ಸರ್ಜಿಕಲ್ ಕಂಪನಿಯು ಒಪ್ಪಂದದಡಿ ಈ ನವೀನ ತಂತ್ರಜ್ಞಾನವನ್ನು ಏಮ್ಸ್‌ಗೆ ಒದಗಿಸಿದೆ. ಇದರೊಂದಿಗೆ, ದೇಶದಲ್ಲಿ ತರಬೇತಿಯ ಉದ್ದೇಶಕ್ಕಾಗಿ ಎರಡು ಪ್ರತ್ಯೇಕ ರೋಬೋಟಿಕ್ ವ್ಯವಸ್ಥೆಗಳಿರುವ ಏಕೈಕ ಸಂಸ್ಥೆಯಾಗಿ ಎಐಐಎಂಎಸ್ ದೆಹಲಿ ಹೊರಹೊಮ್ಮಿದೆ. ಈಗಾಗಲೇ ಈ ಸೌಲಭ್ಯದಲ್ಲಿ ಮೆಡ್‌ಟ್ರಾನಿಕ್ ಸಂಸ್ಥೆಯ ಹುಗೋ ರೋಬೋಟಿಕ್ ಟ್ರೈನರ್ ಇತ್ತು. ಈಗ ಹೊಸ ಡಾ.ವಿಂಚಿ ಸೌಲಭ್ಯದ ಸೇರ್ಪಡೆಯಿಂದ ವಿದ್ಯಾರ್ಥಿಗಳು, ನರ್ಸ್‌ಗಳು ಹಾಗೂ ಅಧ್ಯಾಪಕರಿಗೆ ಸಮಗ್ರ ಹಾಗೂ ನೈಜ ಅನುಭವ ಆಧಾರಿತ ತರಬೇತಿ ದೊರೆಯಲಿದೆ. ಈ ಸಂದರ್ಭದಲ್ಲಿ ಮಾತನಾಡಿದ ಏಮ್ಸ್ ದೆಹಲಿಯ ನಿರ್ದೇಶಕ ಡಾ. ಎಂ. ಶ್ರೀನಿವಾಸ್, ಈ ಕೇಂದ್ರ, ಹೊಸ ಶಸ್ತ್ರಚಿಕಿತ್ಸಾ ತಂತ್ರಜ್ಞಾನಗಳಲ್ಲಿಯೇ ಏಮ್ಸ್ ನ ಪಾತ್ರವನ್ನು ಬಲಪಡಿಸುತ್ತಿದೆ. ಭಾರತದಲ್ಲಿ ಈಗ ರೋಬೋಟ್ ಶಸ್ತ್ರಚಿಕಿತ್ಸೆಯ ತರಬೇತಿ ಲಭ್ಯವಾಗುತ್ತಿದೆ. ಇದು ಹಿಂದಿನ ಕಾಲದಲ್ಲಿ ವಿದೇಶದಲ್ಲಷ್ಟೇ ಸಿಗುತ್ತಿತ್ತು," ಎಂದು ಹೇಳಿದರು.

><><><><><><

ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿರುವ ತಮ್ಮ ಕೆಲಸದ ಸ್ಥಳದಲ್ಲಿ ನಡೆದ ಆಘಾತಕಾರಿ ಹಿಂಸಾಚಾರದಲ್ಲಿ ಭಾರತೀಯ ಪ್ರಜೆ ಚಂದ್ರ ನಾಗಮಲ್ಲಯ್ಯ ಅವರು ಸಾವನ್ನಪ್ಪಿದ್ದಾರೆ. ಹೂಸ್ಟನ್‌ನಲ್ಲಿರುವ ಭಾರತೀಯ ಕಾನ್ಸುಲೇಟ್ ಜನರಲ್ ಸಾಮಾಜಿಕ ಮಾಧ್ಯಮದಲ್ಲಿ ಈ ಘಟನೆಯನ್ನು ದೃಢಪಡಿಸಿದ್ದಾರೆ ಮತ್ತು ಮೃತನ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ. ಆರೋಪಿ ಬಂಧನದಲ್ಲಿದ್ದಾರೆ ಮತ್ತು ಈ ವಿ?ಯವನ್ನು ನಿಕಟವಾಗಿ ಗಮನಿಸಿರುತ್ತಿರುವುದಾಗಿ ಭಾರತದ ಕಾನ್ಸುಲೇಟ್ ಜನರಲ್ ತಿಳಿಸಿದ್ದಾರೆ.

><><><><><><

ಭಾರತದ ಕಡಲ ಭದ್ರತೆಗೆ ಹೊಸ ಚೈತನ್ಯ ನೀಡುವ ನಿಟ್ಟಿನಲ್ಲಿ, ಭಾರತೀಯ ನೌಕಾಪಡೆ ಐಎನ್ಎಸ್ ಅರಾವಲಿ ಯನ್ನು ಇಂದು ಹರಿಯಾಣದ ಗುರುಗ್ರಾಮದಲ್ಲಿ ಅಧಿಕೃತವಾಗಿ ಕಾರ್ಯಾರಂಭಗೊಳಿಸಲಿದೆ. ಐಎನ್ಎಸ್ ಅರಾವಲಿ ನೌಕಾಪಡೆಯ ಮಾಹಿತಿ ಹಾಗೂ ಸಂವಹನ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಹೊಂದಿದೆ. ಐಎನ್ಎಸ್ ಅರಾವಲಿ, ನೌಕಾಪಡೆಯ ಕಮಾಂಡ್,

ಕಂಟ್ರೋಲ್ ಮತ್ತು ಮೆರಿಟೈಮ್ ಡೊಮೇನ್ ಎವೆರ್ನೆಸ್ ಒಆಂ ಆಧಾರವಾದ ಮಾಹಿತಿ ಮತ್ತು ಸಂವಹನ ಕೇಂದ್ರಗಳನ್ನು ಬೆಂಬಲಿಸುವ ಪ್ರಮುಖ ನೆಲೆ ಆಗಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ, ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

><><><><><><

ಹಾಂಗ್‌ಕಾಂಗ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸೆಮಿಫೈನಲ್ ಪ್ರವೇಶಿಸಿದೆ. ಭಾರತೀಯ ಜೋಡಿ ಇಂದು ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮಲೇಷ್ಯಾದ ಜುನೈದಿ ಆರಿಫ್ ಮತ್ತು ರಾಯ್ ಕಿಂಗ್ ಯಾಪ್ ಜೋಡಿಯನ್ನು ೨೧-೧೪, ೨೦-೨೨, ೨೧-೧೬ ಸೆಟ್‌ಗಳ ಅಂತರದಲ್ಲಿ ಸೋಲಿಸಿ ಅಂತಿಮ ನಾಲ್ಕರ ಘಟ್ಟಕ್ಕೆ ಪ್ರವೇಶ ಪಡೆದಿದೆ.

><><><><><><

ಉಜ್ಬೆಕಿಸ್ತಾನದ ಸಮರ್ಕಂಡ್‌ನಲ್ಲಿ ನಡೆಯುತ್ತಿರುವ ಫಿಡೆ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್ ನಿಹಾಲ್ ಸಾರಿನ್ ಅದ್ಭುತ ಜಯದೊಂದಿಗೆ ಟೂರ್ನಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ. ಇರಾನ್‌ನ ಪರ್ಹಾಮ್ ಮಘ್ಸೂದ್ಲೂ ವಿರುದ್ಧ ಜಯ ಗಳಿಸಿದ ನಿಹಾಲ್, ೫.೫ ಅಂಕಗಳನ್ನು ಹೊಂದಿದ್ದಾರೆ.

><><><><><><

ಬಿಯೆಲ್‌ನ ಸ್ವಿಸ್ ಟೆನಿಸ್ ಅರೆನಾದಲ್ಲಿ ಇಂದು ಡೆವಿಸ್ ಕಪ್ ೨೦೨೫ ವಿಶ್ವ ಗುಂಪು ಒಂದರ ಟೈ ಪಂದ್ಯದಲ್ಲಿ ಒಂಭತ್ತನೇ ಸ್ಥಾನದಲ್ಲಿರುವ ಸ್ವಿಟ್ಜರ್‌ಲ್ಯಾಂಡ್ ವಿರುದ್ಧ ಭಾರತದ ತಂಡ ಕಣಕ್ಕಿಳಿಯಲಿದೆ. ಸುಮಿತ್ ನಾಗಲ್ ಈ ಪಂದ್ಯದಲ್ಲಿ ಭಾರತೀಯ ತಂಡವನ್ನು ಮುನ್ನಡೆಸಲಿದ್ದಾರೆ. ಈ ಟೈನಲ್ಲಿ ಗೆದ್ದ ತಂಡ ೨೦೨೬ರ ಮೊದಲನೇ ಸುತ್ತಿನ ಕ್ವಾಲಿಫೈಯರ್ಸ್‌ಗೆ ಮುನ್ನಡೆಯುತ್ತದೆ.

><><><END><><><